


**ವನಜಾ:** ನಿನ್ನೆ ರಾತ್ರಿ ನನಗೂ ನಮ್ ಯಜಮಾನರಿಗೂ ತುಂಬಾ ಹೊತ್ತು ಜಗಳ ಆಯಿತು.
**ಜಲಜಾ:** ಹೌದಾ, ಪಾಪ ನಿಮ್ಮ ಯಜಮಾನರು ಈಗ ಯಾವ ಆಸ್ಪತ್ರೆಯಲ್ಲಿ ಇದ್ದಾರೆ.

**ನಿಮ್ಮಿ:** ನನಗೆ ನನ್ನ ಗಂಡ ಬೇಕು ಸಾರ್!
**ಜಡ್ಜ್:** ಇದೇನಮ್ಮಾ, ನಿಮ್ಮಿಬ್ಬರ ಡೈವೋರ್ಸ್ ಆಗಿ ಒಂದು ವಾರ ಕೂಡ ಆಗಿಲ್ಲ, ಈಗ ಮತ್ತೆ ಅವನೇ ಬೇಕು ಅಂತ ಕೇಳ್ತಿದ್ದೀಯ?
**ನಿಮ್ಮಿ:** ಡೈವೋರ್ಸ್ ಆದ ಮೇಲೆ ಅವನು ಪಡುತ್ತಿರುವ ಸಂತೋಷ ನನ್ನ ಕೈಯಲ್ಲಿ ನೋಡೋಕ್ಕೆ ಆಗ್ತಾ ಇಲ್ಲ ಸ್ವಾಮಿ.




**ಅವನು:** ನಾಳೆ ನನ್ನ ಗರ್ಲ್ ಫ್ರೆಂಡ್ ಬರ್ತಡೇಗೆ ಏನು ಕೊಡೋದು ಅಂತಾ ಯೋಚನೆ ಮಾಡಿ ಮಾಡಿ ಸಾಕಾಯಿತು.
**ಇವನು:** ನೋಡಕ್ಕೆ ಹೇಗಿದ್ದಾಳೆ.
**ಅವನು:** ತುಂಬಾ ತುಂಬಾ ಚೆನ್ನಾಗಿದ್ದಾಳೆ.
**ಇವನು:** ಹಾಗಾದ್ರೆ ಅವಳಿಗೆ ನನ್ನ ಮೊಬೈಲ್ ನಂಬರ್ ಕೊಡು.

**ಹುಡುಗಿ:** ಪ್ಲಾಸ್ಟಿಕ್ ಸರ್ಜರಿಗೆ ಎಷ್ಟು ಫೀಸ್ ತಗೋತೀರಿ?
**ಡಾಕ್ಟರ್:** ಸುಮಾರು ಐವತ್ತು ಸಾವಿರ ಆಗಬಹುದು.
**ಹುಡುಗಿ:** ತುಂಬಾನೆ ಜಾಸ್ತಿ ಆಯ್ತು, ಒಂದ್ ವೇಳೆ ನಾವೇ ಪ್ಲಾಸ್ಟಿಕ್ ತಂದ್ರೆ ಕಡಿಮೆ ಆಗುತ್ತಾ?

**ಕಿಟ್ಟು:** ಅಪ್ಪ ಇಲ್ಲಿ ಬಾ.
**ಅಮ್ಮ:** ನೋಡು ಕಂದ, ಅಪ್ಪನನ್ನು ಮರ್ಯಾದೆಯಿಂದ ಕರೆಯಬೇಕು, ಗೊತ್ತಾಯ್ತಾ?
**ಕಿಟ್ಟು:** ಆಯ್ತಮ್ಮ, ಅಪ್ಪ ಮರ್ಯಾದೆ ಇಂದ ಇಲ್ಲಿ ಬಾ.

**ಮೇಷ್ಟು:** ನಿಜವಾದ ಕನ್ನಡಿಗ ಯಾರು?
**ಗುಂಡ:** ಯಾರು ಇಂಗ್ಲಿಷ್‌ನಲ್ಲಿ ಫೇಲ್ ಆಗುತ್ತಾರೋ, ಅವರೇ ನಿಜವಾದ ಕನ್ನಡಿಗರು.

**ಹೆಂಡತಿ:** (ಮಹಾ ಕುಂಭಮೇಳದಲ್ಲಿ) ನಾನು ಅಕಸ್ಮಾತ್ ಇಲ್ಲಿ ತಪ್ಪಿಸಿಕೊಂಡರೆ ಏನು ಮಾಡುತ್ತೀರಿ?
**ಗಂಡ:** ಕೂಡಲೇ ಪೊಲೀಸ್ ಕಂಟ್ರೋಲ್ ರೂಮ್‌ನಲ್ಲಿ ಅನೌನ್ಸ್ ಮಾಡಿಸುವೆ.
**ಹೆಂಡತಿ:** ಒಹ್!.. ಎಷ್ಟು ಪ್ರೀತಿ ನನ್ ಮೇಲೆ. ಏನೆಂದು ಅನೌನ್ಸ್ ಮಾಡಿಸುತ್ತೀರಿ?
**ಗಂಡ:** ಎಲ್ಲೇ ಇರು, ಹೇಗೇ ಇರು, ನೀ ಅಲ್ಲೇ ಇರು.

**ಆತ:** ಈಗಿನ ಕಾಲದಲ್ಲೂ ಸಾಕಷ್ಟು ಹೆಂಡತಿಯರು ಗಂಡಂದಿರಿಗೆ ಊಟ ಬಡಿಸಿ, ಆಮೇಲೆ ಊಟ ಮಾಡ್ತಾರೆ.
**ಈತ:** ಅಯ್ಯೋ ಪೆದ್ದು, ಸೈನ್ಸ್ ಪ್ರಕಾರ ಏನೇ ಪ್ರಯೋಗ ಮಾಡಬೇಕಾದರೂ ಮೊದಲು ಪ್ರಾಣಿಗಳ ಮೇಲೆಯೇ ಮಾಡೋದು.

**ಮೇಷ್ಟು:** ಪಕ್ಷಾಂತರ ಎಂದರೆ ಏನು?
**ಕಿಟ್ಟು:** ಪಕ್ಷ ಬದಲಾಯಿಸುವುದು.
**ಮೇಷ್ಟು:** ಗುಡ್, ಸ್ಥಳಾಂತರ ಎಂದರೇನು?
**ಕಿಟ್ಟು:** ಸ್ಥಳವನ್ನು ಬದಲಾಯಿಸುವುದು.
**ಮೇಷ್ಟು:** ವೆರಿ ಗುಡ್, ಗಂಡಾಂತರ ಎಂದರೇನು?
**ಕಿಟ್ಟು:** ಗಂಡನನ್ನು ಬದಲಾಯಿಸುವುದು.
**ಮೇಷ್ಟು:** ಮುಠ್ಠಾಳ, ಬೆಂಚ್ ಮೇಲೆ ನಿಂತುಕೋ.

ಸಂಗ್ರಹ: ಆರ್. ವೀರೇಶ್ ಕುಮಾರ್,
ಬೆಂಗಳೂರು




ಕ್ಯಾನ್ಸರ್ ಇದೆಯೇ?
ಯಾವುದೇ ಹಂತದ ಕ್ಯಾನ್ಸರ್‌ಗೆ ಆಯುರ್ವೇದ/ನಾಟಿ ಔಷಧ ಕೊಡಲಾಗುವುದು.
ಕೇವಲ ₹2000/- ಮಾತ್ರ
ಕಪಿಲಾ ಆರೋಗ್ಯಧಾಮ
ಲಯನ್ ಸಫಾರಿ ಸಮೀಪ,
ತ್ಯಾವರೆಕೊಪ್ಪ, ಶಿವಮೊಗ್ಗ-577204.
ಸಂಪರ್ಕಿಸಿ: 07619553245
08277196659
Post/ ಕೊರಿಯರ್ ಸೌಲಭ್ಯ ಇದೆ
ವಿ.ಸೂ.: ಚರ್ಮ ಹಾಗೂ ಕೂದಲಿನ ತೊಂದರೆ, ನರದ ತೊಂದರೆಗಳಿಗೂ ಔಷಧ ಕೊಡಲಾಗುವುದು.